# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 38/2022**

**ದೋ.ಸಾ. :7 ಫ್ರಾ.ಸಾ. :5**

ಸಾಕ್ಷಿಯ ಹೆಸರು : ಸೈಬಾಜ್ ಸುಬಾನಿ ಜಮಾದಾರ
ಗಂಡನ ಹೆಸರು : ಸುಬಾನಿ ಜಮಾದಾರ
ವಯಸ್ಸು : 30 ವರ್ಷ
ಕೆಲಸ : ಮನೆ ಕೆಲಸ
ವಾಸ : ಗುಂಜಾವತಿ, ಮುಂಡಗೋಡ

**ದಿನಾಂಕಃ 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಚಾ.ಸಾ.1, 4 ರಿಂದ 6 ನನ್ನ ಸಂಬಂಧಿಕರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ. 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ದೂಡಾಡಿಲ್ಲ ಹಾಗೂ ಚಾ.ಸಾ.6 ರವರಿಗೂ ಸಹ ಹೊಡೆದದ್ದು, ಬಡಿದಿದ್ದು ಇರುವುದಿಲ್ಲ ಹಾಗೂ ಅವಳ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿರುವುದಿಲ್ಲ. 3 ನೇ ಆರೋಪಿತನು ಚಾ.ಸಾ. 5 ರವರಿಗೆ ಹೊಡೆದಿಲ್ಲ. 3 ಮತ್ತು 4 ನೇ ಆರೋಪಿತರು ಸೇರಿ ಚಾ.ಸಾ.1, 4 ರಿಂದ 6 ರವರಿಗೆ ಹೊಡೆದದ್ದು ಇರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿದ್ದು ಇರುವುದಿಲ್ಲ. ಚಾ.ಸಾ.6 ರವರು ಕೆಲಸ ಮಾಡುವಾಗ ಬಿದ್ದು ನೋವು ಮಾಡಿಕೊಂಡಿದ್ದು, ಈ ಬಗ್ಗೆ ಮುಂಡಗೋಡದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾಳೆ. ಘಟನೆ ಕುರಿತಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ, ಅನುಮತಿ ನೀಡಲಾಯಿತು)

2. ದಿನಾಂಕ 14.04.2019 ರಂದು ನಾನು ಹಾಗೂ ಚಾ.ಸಾ. 1, 4 ರಿಂದ 6 ರವರು ಸೇರಿ ನಮ್ಮ ಸಂಬಂಧಿಕರಾದ ಶಬಾನ ಇವಳ ಮದುಗೆ ಹೋಗಿದ್ದೆವು ಎಂದರೆ ಸರಿಯಲ್ಲ.

3. ನಂತರ ದಿನಾಂಕ 15.04.2019 ರಂದು ರಾತ್ರಿ ನಾವು ನನ್ನ ತವರು ಮನೆಯಲ್ಲಿದ್ದಾಗ 1 ನೇ ಆರೋಪಿತನು ಅಲ್ಲಿಗೆ ಬಂದು ನನ್ನ ಹತ್ತಿರ ಚಾ.ಸಾ. 4 ರವರಿಗೆ ಹೊಡೆಯುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಆತನಿಗೆ ಜಗಳ ಮಾಡಬೇಡಿ ಎಂದು ಹೇಳಿದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿದರು ಎಂದರೆ ಸರಿಯಲ್ಲ. ಚಾ.ಸಾ 6 ರವರು ಅಲ್ಲಿಗೆ ಬಂದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.6 ವರಿಗೆ ಕೈಯಿಂದ ತಲೆಗೆ ಹೊಡೆದು, ಆಕೆಯ ಬಟ್ಟೆಯನ್ನು ಹರಿದು ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿ ದೂಡಿ ಹಾಕಿದರು ಎಂದರೆ ಸರಿಯಲ್ಲ. ಆಗ ಆಕೆ ಕೆಳಗೆ ಬಿದ್ದಿದ್ದು, ಆಕೆಯ ತಲೆಗೆ ಒಳಪೆಟ್ಟು ಆಯಿತು ಎಂದರೆ ಸರಿಯಲ್ಲ. ಇದನ್ನು ನೋಡಿ ಬಿಡಿಸಲು ಹೋದ ಚಾ.ಸಾ.5 ರವರಿಗೆ 3 ನೇ ಆರೋಪಿತನು ಕೈಯಿಂದ ಹೊಡೆದನು ಎಂದರೆ ಸರಿಯಲ್ಲ. ನಂತರ 3 ಮತ್ತು 4 ನೇ ಆರೋಪಿತರು ಸೇರಿ ಅವರೆಲ್ಲರಿಗೂ ಕೈಯಿಂದ ಹೊಡೆದರು ಎಂದರೆ ಸರಿಯಲ್ಲ. ಊರಿನ ಜನ ಬರುವುದನ್ನು ನೋಡಿ, ಅವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ಚಾ.ಸಾ.1, 4, 5 ರವರು ಸೇರಿ ಚಾ.ಸಾ.6 ರವರನ್ನು ಮುಂಡಗೋಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಚಾ.ಸಾ.6 ರವರು ಬಿದ್ದು ಪೆಟ್ಟು ಮಾಡಿಕೊಂಡಿದ್ದರಿಂದ ಅವರು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಈ ಮೇಲೆ ಹೇಳಿದಂತೆ ದಿನಾಂಕ 08.07.2019 ರಂದು ಚಾ.ಸಾ.13 ರವರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ 7 ಎಂದು ಗುರುತಿಸಲಾಯಿತು.

4. ಈ ಪ್ರಕರಣದ 4 ನೇ ಆರೋಪಿತನು ಚಾ.ಸಾ.1, 4 ಮತ್ತು 5 ರವರ ಮೇಲೆ ದೂರನ್ನು ನೀಡಿದ್ದು, ಅದು ಇದೇ ನ್ಯಾಯಾಲಯದಲ್ಲಿ ಸ್ಪೆಶಲ್ ಕೇಸ್ ನಂಬರ 27/2020 ರಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಅವರು ಈ ಪ್ರಕಣದಲ್ಲಿ ಚಾ.ಸಾ.1, 4 ಮತ್ತು 5 ರವರ ವಿರುದ್ಧ ಸಾಕ್ಷಿ ನುಡಿಯಬಹುದು ಎಂಬ ಕಾರಣದಿಂದಾಗಿ ನಾನು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎ.ಕೆ . ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ